## ಕಥೋಪದೇಶ

# ಪ್ರಗತಿಯ ಗುಟ್ಟು

ಕಲೆ ಮತ್ತು ಸಾಹಿತ್ಯ: ಪುರುಷೋತ್ತಮ ಕಾರಂತ



ಭಗವಂತನೊಮ್ಮೆ
ಸೃಷ್ಟಿಸಿದನಂತೆ
ಈ ಜಗವನೂ,
ಈ ಜೀವ ಜಾಲವನೆಲ್ಲ.
ತನ್ನ ಅಸಂಖ್ಯ
ಸದ್ಗುಣಗಳನೆಲ್ಲ
ಸೇವಕನೊಳಿತ್ತು
ಎಂದನಂತೆ,
'ಹಂಚುವುದು ಇವುಗಳನು
ಯೋಗ್ಯವಾಗಿ
ಮೃಗಪಕ್ಷಿ ಜೀವಜಾಲಕೆ
ಮನಮೆಚ್ಚುವಂತೆ.'
ಸೇವಕನ ಬುದ್ಧಿಗೇ
ಮೀರಿತ್ತು
ಈ ಮಹಾಕಾರ್ಯ.
ಚೆಲ್ಲಿ ಹಂಚುತಲಾಯ್ತು ಅಚಾತುರ್ಯ :
ದೊಡ್ಡ ಆನೆಗೇ ಮತ್ತೆ ಬಲ
ಬಣ್ಣದ ನವಿಲಿಗೇ ಮತ್ತೆ ಕುಣಿತ-ನೃತ್ಯ
ಚಪಲ ಜಿಂಕೆಗೇ ಮಿರುಗು, ಕುದುರೆಗೆ ವೇಗ,
ಹರುಷದ ಹಾರುಹಕ್ಕಿಗೇ ಹಾಡು–ವಿಷದ ಹಾವಿಗೆ
ಪೂಜೆ......
ಗುಣಗಳೆಲ್ಲವು ಹೀಗೆ ಮುಗಿದಿರಲು–
ಮನುಜನಿದಿರಲಿ ನಿಂದ
ಸೇವಕನು ತಳಮಳದಿ ದೇವನಿಗೆ ಶರಣೆಂದ!
ಭಗವಂತ ಮನಕರಗಿ ಕರುಣೆಯಿಂದ
ಬಂದು ನಿಂತನು ತಾನೆ ಮನುಜನಿದಿರು
ಸಂತಸದೊಳಿರಿಸಿದನು
ತನ್ನಂಶವೊಂದನಿವನೆದೆಯೊಳು!

ಈಗ ಹುಟ್ಟಿದ ಮಗು ಎಂದರೆ ಏನೂ ಇಲ್ಲ–ಎಂದಲ್ಲ! ನಿಜವಾಗಿ ಅದು ಏನೂ ಇರಬಹುದು. ಅದು ತನ್ನಂತಸ್ಸತ್ವವನ್ನರಳಿಸಿಕೊಂಡು ತನ್ನದೇ ಆದ ರೀತಿಯಲ್ಲಿ ಬೆಳೆಯುವುದು. ಇದು ಮನುಷ್ಯನಿಗೆ ಮಾತ್ರ ಸಾಧ್ಯ. ಶ್ರೀಕೃಷ್ಣನು ಭಗವದ್ಗೀತೆಯಲ್ಲಿ–ಎಲ್ಲದರಲ್ಲೂ ನನ್ನ ಒಂದಂಶವನ್ನು ಇರಿಸಿದ್ದೇನೆ–ಎನ್ನುತ್ತಾನೆ. ಆದ್ದರಿಂದಲೇ ಮನುಷ್ಯನಿಗೆ ಮಾತ್ರ ಮುಂದೆ ಮುಂದೆ ವಿಕಾಸವಾಗುವ ಆಸೆ. ಇದೇ ನಮ್ಮ ಪ್ರಗತಿಯ ಗುಟ್ಟು. ಈ ಒಂದಂಶವನ್ನು ವೃದ್ಧಿಸುವ ಸ್ವಾಭಾವಿಕ ಹುಮ್ಮಸ್ಸು, ಇಚ್ಛೆ ನಮ್ಮೊಳಗೆ ಸದಾ ಸ್ಫುರಿಸುತ್ತಿರುತ್ತದೆ.